1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 45/2021
ದಿನಾಂಕ ಃ 11.08.2026 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 23 ಪಿ. ಡಬ್ಲ್ಯೂ:13

| | |
|---|---|
| ಸಾಕ್ಷಿದಾರರ ಹೆಸರು | ಶರತ್ ಕುಮಾರ್ ಹೆಚ್ ಪಿ |
| ತಂದೆಯ ಹೆಸರು | ಪ್ರಕಾಶ್ |
| ವಯಸ್ಸು | 40 ವರ್ಷ |
| ಉದ್ಯೋಗ | ಪೊಲೀಸ್ ಇನ್ಸ್‌ಪೆಕ್ಟರ್, ಪಾಂಡವಪರು ಪೊಲೀಸ್ ಠಾಣೆ. |
| ವಾಸ | ಪಾಂಡವಪುರ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ನವೆಂಬರ್ 2019 ರಿಂದ ಜೂನ್ 2021 ರವರೆಗೆ ಮಂಡ್ಯ ಪೂರ್ವ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 03.12.2019 ರಂದು ಸಂಜೆ ಸುಮಾರು 7.00 ರಲ್ಲಿ ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಮಂಡ್ಯ ಮಿಮ್ಸ್ ಆಸ್ಪತ್ರೆಯಿಂದ ಅಂಜಲಿ ಎಂಬಾಕೆ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಒಂದು ಡೆತ್ ಇಂಟಿಮೇಷನ್ ಬಂದಿರುತ್ತದೆ. ತಕ್ಷಣ ನಾನು ಮಂಡ್ಯ ಮಿಮ್ಸ್ ಆಸ್ಪತ್ರೆ ಡೆತ್ ಮೆಮೋ ಸ್ವೀಕರಿಸಿದ್ದೇನೆ. ಅದು ನಿಪಿ.11. ಸಾಕ್ಷಿಯು, ನಿಪಿ.11 ರಲ್ಲಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನುನ ನಿಪಿ.11(ಬಿ) ಎಂದು ಗುರುತಿಸಲಾಯಿತು.
3. ಬಳಿಕ ಮೃತ ಅಂಜಲಿಯ ಪೋಷಕರನ್ನು ಭೇಟಿ ಮಾಡಿದಾಗ, ಅವರು ಪೊಲೀಸ್ ಠಾಣೆಗೆ ಬಂದು ದೂರು ನೀಡುವುದಾಗಿ ತಿಳಿಸಿದರು.
4. ಬಳಿಕ ಪೊಲೀಸ್ ಠಾಣೆಗೆ ಬಂದು, ಪೊಲೀಸ್ ಠಾಣೆಯ ಪ್ರಭಾರದಲ್ಲಿ ಇದ್ದಾಗ, ರಾತ್ರಿ 8.30 ಗಂಟೆಗೆ ಚಾಸಾ.1 ರವರು ಪೊಲೀಸ್ ಠಾಣೆ ಗೆ ಹಾಜರಾಗಿ ನೀಡಿದ ಮುದ್ರಿತ ಲಿಖಿತ ದೂರು ನಿಪಿ.1 ನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ನಂಃ131/2019 ರಂತೆ ಆರೋಪಿ ವಿರುದ್ಧ ದಾಖಲು ಮಾಡಿದ್ದೇನೆ. ಸಾಕ್ಷಿಯು ನಿಪಿ.1 ದೂರನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯ ವಿರುದ್ಧ ಪ್ರಥಮ ವರ್ತಮಾನ ವರದಿ ತಯಾರು ಮಾಡಿ ಅದನ್ನು ಮಾನ್ಯ ನ್ಯಾಯಾಲಯಕ್ಕೂ ಕಳುಹಿಕೊಟ್ಟಿರುತ್ತೇನೆ ಮತ್ತು ಇಲಾಖಾ ಮೇಲಾಧಿಕಾರಿಗೂ ವರದಿ ಮಾಡಿದ್ದೇನೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ಗುರುತಿಸಿದ್ದು ಅದನ್ನು ನಿಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು.

5. ಬಳಿಕ ತನಿಖೆಯನ್ನು ಮುಂದುವರೆಸಿ, ದಿಃ 04.12.2019 ರಂದು ಕೃತ್ಯ ನಡೆದ ಸ್ಥಳವಾದ ಸ್ವರ್ಣಸಂದ್ರದ ಚಾಸಾ.7 ರವರ ಮನೆಯ ಬಳಿಗೆ ಭೇಟಿ ನೀಡಿ, ಪಂಚರಾದ ಚಾಸಾ.11 ಮತ್ತು 12 ರವರನ್ನು ಬರಮಾಡಿಕೊಂಡು, ಅವರಿಗೆ ನೋಟಿಸು ಜಾರಿ ಮಾಡಿ, ಪಂಚರಾಗಿ ಇರುವಂತೆ ಕೋರಿಕೊಂಡು ಅವರ ಸಮಕ್ಷಮ ಚಾಸಾ. 7 ರವರು ತೋರಿಸಿದ ಜಾಗದಲ್ಲಿ ಬೆಳಗ್ಗೆ 8 ರಿಂದ 8.45 ಗಂಟೆ ರವರೆಗೆ ನಿಪಿ.7 ರಂತೆ ಕೃತ್ಯ ಸ್ಥಳದ ಮಹಜರ್ ಕ್ರಮ ಜರುಗಿಸಿದ್ದೇನೆ. ಸದರಿ ಸಮಯದಲ್ಲಿ ಚಾಸಾ.7 ರವರು ಮೃತೆ ಅಂಜಲಿ ನೇಣು ಹಾಕಿಕೊಂಡಿದ್ದ ವೇಲನ್ನು ಹಾಜರು ಪಡಿಸಿದ್ದು, ಅದನ್ನು ಅಮಾನತ್ತು ಪಡಿಸಿಕೊಂಡಿದ್ದೇನೆ. ಮಹಜರ್ ಕಾಲಕ್ಕೆ ಫೋಟೋ ಕೂಡ ತೆಗೆಸಿದ್ದೇನೆ. ಮಹಜರನ್ನು ಚಾಸಾ.17 ರವರಿಗೆ ಉಕ್ತಲೇಖನ ಕೊಟ್ಟು ಬರೆಸಿದ್ದೇನೆ. ಮಹಜರ್ ಬರೆಸಿದ ಬಳಿಕ ಅದಕ್ಕೆ ಚಾಸಾ.7, ಚಾಸಾ.11, ಚಾಸಾ. 12 ಮತ್ತು ಚಾಸಾ.17 ರವರ ಸಹಿ ಪಡೆದು, ನಾನು ಸಹಿ ಮಾಡಿದ್ದೇನೆ. ಸಾಕ್ಷಿಯು ನಿಪಿ.7 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಹಿಗಳನ್ನು ನಿಪಿ.7(ಸಿ) ಮತ್ತು 7(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.3 ಫೋಟೋವನ್ನು ಕೂಡ ನೋಡಿ ಗುರುತಿಸಿರುತ್ತಾರೆ. ನಿಪಿ.3 ರಲ್ಲಿ ಸಾಕ್ಷಿಗಳಾದ ಚಾಸಾ.11 ಮತ್ತು 12 ರವರು ಕೂಡ ಕಾಣುತ್ತಿದ್ದಾರೆ. ಪಂಚನಾಮೆಗೆ ಮೊದಲು ಸಾಕ್ಷಿಗಳಾದ ಚಾಸಾ.11 ಮತ್ತು 12 ರವರಿಗೆ ನೋಟಿಸು ಜಾರಿ ಮಾಡಿದ್ದೇನೆ. ಸಾಕ್ಷಿಯು ಗುರುತಿಸಿದ ಸದರಿ ನೋಟಿಸುಗಳನ್ನು ನಿಪಿ.14 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.14(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನಿಪಿ.7 ಪಂಚನಾಮೆ ಕಾಲಕ್ಕೆ ಅಮಾನತ್ತು ಪಡಿಸಿದ ವೇಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.1- ವೇಲನ್ನು ನೋಡಿ ಗುರುತಿಸಿರುತ್ತಾರೆ. ನಂತರ ಠಾಣೆಗೆ ವಾಪಸ್ಸು ಆಗಿ ಅಮಾನತ್ತು ಪಡಿಸಿಕೊಂಡ ಮುಮಾ.1 ನ್ನು ಠಾಣಾ PF No.127/2019 ರಲ್ಲಿ ನಮೂದಿಸಿದ್ದೇನೆ.

6. ನಂತರ ಮೃತಳ ಬಾಬ್ತು ಶವ ಪಂಚನಾಮೆಯನ್ನು ನಡೆಸಿಕೊಡುವಂತೆ ತಹಶೀಲ್ದಾರ್ ಮಂಡ್ಯ ರವರಿಗೆ ಮನವಿ ನೀಡಿದ್ದೇನೆ. ಸಾಕ್ಷಿಯು ಗುರುತಿದ ಮನವಿಯನ್ನು ನಿಪಿ.15 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ಅದೇ ದಿನ ಬೆಳಗ್ಗೆ 9 ರಿಂದ 11.00 ಗಂಟೆವರೆಗೆ ಚಾಸಾ.22 ರವರು ಮೃತಳ ಶವದ ಬಾಬ್ತು ಶವ ತನಿಖೆಯನ್ನು ನಡೆಸಿ ವರದಿ ನೀಡಿದ್ದಾರೆ. ಅದು ನಿಪಿ.4. ನಿಪಿ.4 ರ ಕಾಲಕ್ಕೆ ತಹಶೀಲ್ದಾರರು ಫೋಟೋ ಕೂಡ ತೆಗೆಸಿದ್ದು, ಅದನ್ನು ಸಹ ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದು ನಿಪಿ.2. ನಿಪಿ.2 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

7. ಅದೇ ದಿನ ಮೃತೆಯ ಮರಣೋತ್ತರ ಪರೀಕ್ಷೆಯನ್ನು ತಹಶೀಲ್ದಾರರವರ ಕೋರಿಕೆಯ ಮೇರೆಗೆ, ಮಂಡ್ಯ ಮಿಮ್ಸ್ ವೈದ್ಯಾಧಿಕಾರಿಗಳು ನಡೆಸಿರುತ್ತಾರೆ. ಮರಣೋತ್ತರ ಪರೀಕ್ಷೆಯ ಕಾಲಕ್ಕೆ ವೈದ್ಯಾಧಿಕಾರಿಗಳು ಮೃತಳ ಮೈಮೇಲೆ ಇದ್ದ ಬಟ್ಟೆಗಳನ್ನು ಮತ್ತು ವಿಸೆರಾವನ್ನು ಸಂಗ್ರಹಿಸಿದ್ದರು. ಅದನ್ನು ನಾನು ಬಳಿಕ ಪಡೆದಿರುತ್ತೇನೆ. ಆ ಬಟ್ಟೆಗಳು ಮುಮಾ.2 ರಿಂದ 5. ಸಾಕ್ಷಿಯು ಮುಮಾ.2 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ.

8. ನಂತರ ಅದೇ ದಿನ ಆರೋಪಿಯನ್ನು ನಮ್ಮ ಸಿಬ್ಬಂದಿಗಳಾದ ರವಿ ಮತ್ತು ಶಿವಯ್ಯ ಎನ್ನುವವರು ನನ್ನ ಮುಂದೆ ಬೆಳಗ್ಗೆ 11.45 ಗಂಟೆಗೆ ಪೊಲೀಸ್ ಠಾಣೆಗೆ ತಂದು ಹಾಜರು ಪಡಿಸಿದ್ದಾರೆ. ನಾನು ಆರೋಪಿಯನ್ನು ವಿಚಾರಣೆ ಮಾಡಿ ಆತನ ವಶದಲ್ಲಿದ್ದ ಒಂದು ಕಪ್ಪು ಬಣ್ಣದ MI ಮೊಬೈಲನ್ನು ಪಂಚನಾಮೆ ಮೂಲಕ ಅಮಾನತ್ತು ಪಡಿಸಿದ್ದೇನೆ. ಆ ಕಾಲಕ್ಕೆ ಚಾಸಾ.13 ಮತ್ತು ಚಾಸಾ.14 ರವರು ಸಾಕ್ಷಿಗಳಾಗಿದ್ದರು. ಸಾಕ್ಷಿಯು, ನಿಪಿ.9 ನ್ನು ಪಂಚನಾಮೆಯನ್ನು ನೋಡಿ ತನ್ನ ತಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ.9(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಗೆ ಮೊದಲು ಚಾಸಾ. 13 ಮತ್ತು 14 ರವರಿಗೆ ನೋಟಿಸು ಕೂಡ ನೀಡಿದ್ದೇನೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ.16 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.16(ಎ) ಮತ್ತು 16(ಬಿ) ಎಂದು ಗುರುತಿಸಲಾಯಿತು.

9. ದಿಃ 05.12.2019 ರಂದು ಸಾಕ್ಷಿಗಳಾದ ಚಾಸಾ.5, 6 ಮತ್ತು 7 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದೇನೆ. ಅವರ ಪೈಕಿ ಚಾಸಾ.6 ರವರು ನನ್ನ ಸಮಕ್ಷಮ ನಿಪಿ.6 ರಂತೆ ಹೇಳಿಕೆಯನ್ನು ನೀಡಿದ್ದಾರೆ. ಸಾಕ್ಷಿಯು ನಿಪಿ.6 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

10. ಚಾಸಾ.7 ರವರು ನನ್ನ ಸಮಕ್ಷಮ ನಿಪಿ.8 ರಂತೆ ಹೇಳಿಕೆಯನ್ನು ನೀಡಿದ್ದಾರೆ. ಸಾಕ್ಷಿಯು ನಿಪಿ.8 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

11. ದಿಃ 16.12.2019 ರಂದು PF No.128/2019 ರಲ್ಲಿ ನಮೂದಿಸಿದ ಮೃತಳ ಬಾಬ್ತು ವಿಸೆರಾವನ್ನು ಚಾಸಾ.15 ರವರ ಮೂಲಕ ಆರ್ ಎಫ್ ಎಸ್ ಎಲ್ ಮೈಸೂರಿಗೆ ಕಳುಹಿಸಿ ಸ್ವೀಕೃತಿಯನ್ನು ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಸ್ವೀಕೃತಿಯನ್ನು ನಿಪಿ.17 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು.

12. ದಿಃ 21.12.2019 ರಂದು ಮೃತೆಯ ಬಾಬ್ತು ಪಿ.ಎಂ. ವರದಿಯನ್ನು ವೈದ್ಯಾಧಿಕಾರಿಗಳು ಮಿಮ್ಸ್ ರವರಿಂದ ಪಡೆದು, ಅದನ್ನು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದು ನಿಪಿ.5.

ನಿಪಿ.5 ರಲ್ಲಿ ಸಾಕ್ಷಿಯು ತನ್ನ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

13. ದಿಃ 11.02.2020 ರಂದು ಮಿಮ್ಸ್ ಆಸ್ಪತ್ರೆಯಿಂದ ಎಂ ಎಲ್ ಸಿ ಎಕ್ಸ್ಟ್ರಾಕ್ಟ್ ನ್ನು ಪಡೆದು ಅದನ್ನು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದು ನಿಪಿ.12. ನಿಪಿ.12 ರಲ್ಲಿ ಸಾಕ್ಷಿಯು ತನ್ನ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

14. ದಿಃ 19.02.2020 ರಂದು ಆರ್ ಎಫ್ ಎಸ್ ಎಲ್ ನಿಂದ ಬಂದ ವರದಿಯನ್ನು ಸ್ವೀಕರಿಸಿ ಅದನ್ನು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ವರದಿಯನ್ನು ನಿಪಿ.18 ಎಂದು, ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು

15. ದಿಃ 09.04.2020 ರಂದು ಮೃತೆ ಮರಣ ಹೊಂದಿದ ಮನೆಯ ಬಾಬ್ತು ದಾಖಲಾತಿಗಳನ್ನು ನಗರಸಭಾ ಕಾರ್ಯಾಲಯ ಮಂಡ್ಯ ಇವರಿಂದ ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಮೃತೆ ಆತ್ಮಹತ್ಯೆ ಮಾಡಿಕೊಂಡ ಮನೆ, ತಿಮ್ಮಮ್ಮ ಕೋಂ ಚೌಡಯ್ಯ ಎನ್ನುವವರ ಹೆಸರಿನಲ್ಲಿ ಇದೆ. ಆ ಮನೆಯಲ್ಲಿ ಚಾಸಾ. 6 ಮತ್ತು 7 ರವರು ವಾಸ್ತವ್ಯ ಇದ್ದರು ಎಂದು ಕೂಡ ತನಿಖೆಯಿಂದ ತಿಳಿದುಕೊಂಡಿದ್ದೇನೆ. ಸಾಕ್ಷಿಯು ನಿಪಿ.10 ತೆರಿಗೆ ಬೇಡಿಕೆ ವಹಿಯನ್ನು ನೋಡಿ ತನ್ನ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

16. ಪೌರಾಯುಕ್ತರು ನಗರಸಭೆ ಮಂಡ್ಯ, ನಿಪಿ.10 ನ್ನು ಕವಚ ಪತ್ರದ ಜೊತೆ ಕಳುಹಿಸಿದ್ದಾರೆ. ಸಾಕ್ಷಿಯು ಗುರುತಿಸಿದ ಕವಚ ಪತ್ರವನ್ನು ನಿಪಿ.19 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮೃತೆ ಮತ್ತು ಆರೋಪಿಯು ಪರಸ್ಪರ ಮೊಬೈಲ್ ನಲ್ಲಿ ಮಾತನಾಡಿದ ಬಗ್ಗೆ ಅವರ ಮೊಬೈಲ್ ಫೋನ್ ಗಳ ಸಿ ಡಿ ಆರ್ ನ್ನು ಪಡೆದು ಕಡತದಲ್ಲಿ ಲಗತ್ತಿಸಿದ್ದೇನೆ. ದಿಃ 03.11.2019 ರಿಂದ 16.11.2019 ರವರೆಗೆ ಆಪಾದಿತ ಮತ್ತು ಮೃತೆ ಫೋನಿನಲ್ಲಿ ಮಾತನಾಡಿದ ಬಗ್ಗೆ ಸಿಡಿಆರ್ ನ್ನು ಪಡೆದು ಕಡದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಸಿ ಡಿ ಆರ್ ನ್ನು ತಕರಾರಿಗೆ ಒಳಪಟ್ಟು ನಿಪಿ.20 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಆರೋಪಿಯ ಮೊಬೈಲ್ ಸಿಮ್ ಬಾಬ್ತು ಸಿ ಎ ಎಫ್ ನ್ನು ಕೂಡ ಪಡೆದು ಹಾಜರುಪಡಿಸಿದ್ದೇನೆ. ಸಾಕ್ಷಿಯು ಗುರುತಿಸಿದ ಸಿ ಎ ಎಫ್ ಫಾರಂ ನ್ನು ನಿಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು.

17. ಈ ಹಂತಕ್ಕೆ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲು ಸಾಕಷ್ಟು ಸಾಕ್ಷಿ ಮತ್ತು ಪುರಾವೆಗಳು ಲಭ್ಯವಾದ ಕಾರಣ ಆರೋಪಿಯ ಮೇಲೆ ದಂಡ ಸಂಹಿತೆ, 306 ಮತ್ತು 504 ರ ಅಡಿಯಲ್ಲಿ ದೋಷಾರೋಪಣ ಪಟ್ಟಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿದ್ದೇನೆ ಮತ್ತು ಇಲಾಖೆಗೆ ವರದಿ ಮಾಡಿದ್ದೇನೆ. ನನ್ನ ಮುಂದೆ ನಮ್ಮ ಸಿಬ್ಬದಿ ಹಾಜರು ಪಡಿಸಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಬಿ ಸಿ ಎಸ್ ವಕೀಲರಿಂದ ಃ**

18. ಮೃತೆ ಆತ್ಮಹತ್ಯೆ ಮಾಡಿಕೊಂಡ ಮನೆಯ ಅಕ್ಕ ಪಕ್ಕ ಸುಮಾರು ಮನೆಗಳು ಇವೆ ಎಂದರೆ ಸರಿ. ಮೃತೆ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ನನಗೆ ಸ್ಥಳೀಯರಿಂದ ಮಾಹಿತಿ ಬಂದಿಲ್ಲ. ಆ ಜಾಗದಲ್ಲಿ ಗಲಾಟೆ ನಡೆದ ಬಗ್ಗೆ ಕೂಡ ನನಗೆ ಸ್ಥಳೀಯರಿಂದ ಮಾಹಿತಿ ಬಂದಿಲ್ಲ. ನನಗೆ, ಮೃತೆ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಆಸ್ಪತ್ರೆಯಿಂದ ಮಾಹಿತಿ ಬಂದ ತಕ್ಷಣ ನಾನು ಆಸ್ಪತ್ರೆಗೆ ಭೇಟಿ ನೀಡಿದ್ದೇನೆ. ನಾನು ಆಸ್ಪತ್ರೆಗೆ ಭೇಟಿ ನೀಡಿದ ಸಮಯದಲ್ಲಿ ನಮ್ಮ ಪೊಲೀಸ್ ಠಾಣೆಯ ಎಸ್ ಹೆಚ್ ಓ ಯಾರು ಆಗಿದ್ದರು ಎಂದು ನನಗೆ ನೆನಪಿಲ್ಲ. ಆಸ್ಪತ್ರೆಗೆ ಭೇಟಿ ನೀಡಿದಾಗ, ಆಸ್ಪತ್ರೆಯಲ್ಲಿ ಮೃತಳ ಪೋಷಕರು ದೂರು ನೀಡಿಲ್ಲ, ಬಳಿಕ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದಾರೆ. ಆಸ್ಪತ್ರೆಗೆ ಭೇಟಿ ನೀಡಿದಾಗ, ಮೃತಳ ಪೋಷಕರನ್ನು ನಾನು ವಿಚಾರಣೆ ಮಾಡಿದ್ದೇನೆ. ನಾನು ಮೃತಳ ಬಾಬ್ತು ಅಪಘಾತ ಮಾಹಿತಿ ನಿಪಿ.11 ನ್ನು ಮಾತ್ರ ಆ ಕಾಲಕ್ಕೆ ಪರಿಶೀಲಿಸಿದ್ದೇನೆ, ವಿನಃ ನಿಪಿ.12 ನ್ನು ಆ ಕಾಲಕ್ಕೆ ನೋಡಿಲ್ಲ. ನಾನು ಆಸ್ಪತ್ರೆಗೆ ಭೇಟಿ ನೀಡಿದ ಬಗ್ಗೆ ಎಸ್ ಹೆಚ್ ಡಿ ಯಲ್ಲಿ ನಮೂದು ಇದೆ. ನಾನು ಆಸ್ಪತ್ರೆಗೆ ಭೇಟಿ ನೀಡಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ನಮ ಪೊಲೀಸ್ ಠಾಣೆಯಿಂದ ಕೆಳಗಡೆ ಮಂಡ್ಯ ಸಂಚಾರ ಪೊಲೀಸ್ ಠಾಣೆ ಮತ್ತು ಬಸ್ ನಿಲ್ದಾಣ ಇದೆ ಎಂದರೆ ಸಾಕ್ಷಿಯು, ಸಂಚಾರಿ ಪೊಲೀಸ್ ಠಾಣೆ ಇದೆ, ಆದರೆ ಬಸ್ ನಿಲ್ದಾಣ 50 ಮೀಟರ್ ದೂರ ಇದೆ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯ ಕೆಳಗಡೆ ಟೈಪಿಂಗ್ ಸೆಂಟರ್ ಇಲ್ಲ, ಆದರೆ ಸ್ವಲ್ಪ ಮುಂದೆ ಇದೆ. ಷುಗರ್ factory circle ಪೊಲೀಸ್ ಠಾಣೆಯಿಂದ ಸುಮಾರು ಅರ್ಧ ಕಿಮೀ ದೂರ ಇದೆ ಎಂದರೆ, ಸ್ವಲ್ಪ ಕಡಿಮೆ ದೂರ ಇದೆ ಎಂದು ನುಡಿಯುತ್ತಾರೆ. ಚಾಸಾ.1 ರವರು ದೂರನ್ನು ಎಲ್ಲಿ ಟೈಪ್ ಮಾಡಿಸಿದರು ಎಂದು ಗೊತ್ತಿಲ್ಲ.

20. ಮೃತೆಯು, ಆತ್ಮಹತ್ಯೆ ಮಾಡಿಕೊಳ್ಳುವ 15 ದಿವಸಗಳ ಮುಂಚೆ ಆಕೆಗೆ ಮದುವೆಯಾಗಿತ್ತು ಎಂದು ತನಿಖೆಯ ವೇಳೆ ತಿಳಿದು ಬಂದಿದೆ. ಆಕೆಯ ಗಂಡನ ಹೆಸರು ಅಭಿಷೇಕ್ ಮತ್ತು ಅವನು ಆಕೆಗೆ ಮೊದಲೇ ಸಂಬಂಧಿ ಎನ್ನುವುದು ಕೂಡ ತಿಳಿದು ಬಂತು. ಮೃತೆಯ ಮದುವೆಯ ದಿನಾಂಕ ಮತ್ತು ಮದುವೆಯ ಸ್ಥಳದ ಬಗ್ಗೆ ನಾನು ತನಿಖೆ ವೇಳೆ ತಿಳಿದುಕೊಂಡಿಲ್ಲ. ಮದುವೆಯ ಕಾಲಕ್ಕೆ ಆಕೆಯ ವಯಸ್ಸು 18 ವರುಷ ಮೀರಿತ್ತು ಎಂದು ಆಕೆಯ ತಾಯಿ ಮೂಲಕ ನಾನು ತಿಳಿದುಕೊಂಡಿದ್ದೇನೆ. ಆಕೆಯ ವಯಸ್ಸು ಮದುವೆಯ ಕಾಲಕ್ಕೆ 18 ಮೀರಿತ್ತು ಎಂದು

ತೋರಿಸುವ ಪ್ರತ್ಯೇಕ ದಾಖಲೆಯನ್ನು ನಾನು ಕಲೆ ಹಾಕಿಲ್ಲ. ಮೃತೆಗೆ ಮದುವೆಯ ಕಾಲಕ್ಕೆ ಆಕೆಯ ವಯಸ್ಸು 18 ವರುಷಕ್ಕೆ 2 ರಿಂದ 3 ದಿನ ಬಾಕಿ ಇತ್ತು ಎನ್ನುವುದು ನನ್ನ ತನಿಖೆಯ ವೇಳೆ ತಿಳಿದಿತ್ತು ಎಂದರೆ ಸರಿಯಲ್ಲ. ನನಗೆ ಸದರಿ ವಿಚಾರ ತಿಳಿದಿದ್ದರೂ ನಾನು ಸತ್ಯಾಂಶ ಮರೆ ಮಾಚಿದ್ದೇನೆ ಎಂದರೆ ಸರಿಯಲ್ಲ.

21. ಶವ ಪಂಚನಾಮೆಯನ್ನು ನಾನು ಮಾಡದೇ ಇದ್ದ ಕಾರಣ, ಆಕೆಯ ರಕ್ತ ಸಂಬಂಧಿಗಳ ಹೇಳಿಕೆ ಯನ್ನು ನಾನು ದಾಖಲು ಮಾಡಿಲ್ಲ. ನಾನು ಶವ ತನಿಖೆಯ ವರದಿಯ ದಾಖಲೆಗಳನ್ನು ಕೂಡ ಪರಿಶೀಲನೆ ಮಾಡಿದ್ದೇನೆ. ಶವ ತನಿಖೆಯ ವರದಿಯನ್ನು ದಿಃ 04.12.2019 ಕ್ಕೆ ಸ್ವೀಕರಿಸಿದ್ದೇನೆ. ಅದನ್ನು ಸ್ವೀಕರಿಸಿದ ಬಗ್ಗೆ ಹಿಂಬರಹ ಇಲ್ಲ. ನಿಪಿ.4 ಶವ ತನಿಖೆಯ ವರದಿಯಲ್ಲಿ ತಹಶೀಲ್ದಾರರ ಸಹಿಯ ಪಕ್ಕದಲ್ಲಿ ಸಹಿ ಮಾಡುವ ಸಲುವಾಗಿ ಗುರುತು ಇದೆ ಎಂದರೆ ಅದನ್ನು ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.4 ನ್ನು ನಾನೇ ತಯಾರಿಸಿ ತಹಶೀಲ್ದಾರರ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

22. ಮೃತಳ ಮೊಬೈಲ್ ನಂಬರನ್ನು ಅವರ ತಾಯಿ ನನಗೆ ತಿಳಿಸಿದ್ದಾರೆ. ದೂರಿನಲ್ಲಿ ಅವಳ ಫೋನ್ ನಂಬರ್ ನಮೂದು ಇಲ್ಲ. ಸದರಿ ಮೊಬೈಲ್ ನಂಬರನ್ನು ಮೃತೆ ಉಪಯೋಗಿಸುತ್ತಿದ್ದಳು ಎಂದು ತೋರಿಸಲು ಪ್ರತ್ಯೇಕ ದಾಖಲೆಯನ್ನು ಹಾಜರು ಪಡಿಸಿಲ್ಲ. ಮೃತೆ ಉಪಯೋಗಿಸುತ್ತಿದ್ದ ಫೋನನ್ನು ನಾನು ಅಮಾನತ್ತು ಮಾಡಿಲ್ಲ, ಯಾಕೆಂದರೆ, ಆಕೆಯ ತಾಯಿ ಆ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ. ಸದರಿ ಮೊಬೈಲ್ ನಂಬರ್ ಆಕೆ ಹೆಸರಿನಲ್ಲಿ ಇತ್ತು ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ಆರೋಪಿಯನ್ನು ಪ್ರಕರಣದಲ್ಲಿ ಸಿಲುಕಿಸಲು ಆಗುವುದಿಲ್ಲ ಎನ್ನುವ ಕಾರಣಕ್ಕೆ ಸದರಿ ಮೊಬೈಲ್ ಬಾಬ್ತು ಮಾಹಿತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮತ್ತು ಆ ಕಾಲಕ್ಕೆ ಅದನ್ನು ಅಮಾನತ್ತು ಪಡಿಸಿಲ್ಲ ಎಂದರೆ ಸರಿಯಲ್ಲ.

23. ದೂರಿನಲ್ಲಿ ಆರೋಪಿ, ಮೃತಳನ್ನು ಫೋನ್ ಮಾಡಿ ಕರೆಸಿಕೊಂಡಿದ್ದ ಎನ್ನುವ ವಿಚಾರ ತಿಳಿದುಬಂತು ಎಂದರೆ ಸರಿ. ನಾನು ಹಾಜರು ಪಡಿಸಿದ ನಿಪಿ.20 ರ ಪ್ರಕಾರ ದಿಃ 03.11.2019 ರಿಂದ 15.11.2019 ರವರಗೆ ಕರೆ ಮಾಹಿತಿಗಳು ಮಾತ್ರ ಇವೆ ಎಂದರೆ ಸರಿ. ಕೃತ್ಯ ನಡೆದ ದಿನ ಮತ್ತು ಅದರ ಹಿಂದಿನ ದಿನಗಳ ಕರೆ ಮಾಹಿತಿ ನಿಪಿ.20 ರಲ್ಲಿ ಇಲ್ಲ ಎಂದರೆ ಸರಿ. ಮೃತಳನ್ನು ಆರೋಪಿಯು ಕರೆಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆತ ಅಕೆಯ ಜೊತೆ ಫೋನಿನಲ್ಲಿ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

24. ಪ್ರಾಸಾ. 1 ರವರ ಮುಖ್ಯ ವಿಚಾರಣೆಯ ಪುಟ 2 ರಲ್ಲಿ ಹೇಳಿದ, ‘ ಆಗ ಚಾಸಾ. 7 ರವರ ಹೆಂಡತಿ ಪಕ್ಕದ ಮನೆಯಲ್ಲಿ ಬಿಟ್ಟಿದ್ದೇನೆ, ಅವಳು ಹೆದರಿಕೊಂಡಿದ್ದಾಳೆ ’ ಎಂದು ಹೇಳಿದರು ಎಂಬ ಅಂಶ ನಿಪಿ.1 ದೂರಿನಲ್ಲಿ ಇಲ್ಲ ಎಂದರೆ ಸರಿ.

25. ಅದೇ ರೀತಿ 2 ನೇ ಪ್ಯಾರಾದಲ್ಲಿ 'ಚಾಸಾ.7 ಮತ್ತು ಅವನ ಹೆಂಡತಿ ....... ಏನೂ ಮಾಡಲು ಅಗುವುದಿಲ್ಲ ಎಂದು ಹೇಳಿದರು' ಎಂಬ ಅಂಶ ನಿಪಿ.1 ದೂರಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

26. ಅದೇ ರೀತಿ ' ಚಾಸಾ. 7 ರವರು ನನ್ನ ಬಾಯಿಯನ್ನು ........ ಎಲ್ಲರೂ ಸ್ಥಳದಿಂದ ಓಡಿ ಹೋದರು ' ಎಂಬ ಅಂಶ ನಿಪಿ.1 ದೂರಿನಲ್ಲಿ ಇಲ್ಲ ಎಂದರೆ ಸರಿ.

27. ಅದೇ ರೀತಿ ' ನಿಮ್ಮ ಮಗಳು ಪಕ್ಕದ ಮನೆಯಲ್ಲಿ ಇದ್ದಾಳೆ ........ ಆಕೆ ಸತ್ತಿದ್ದು ಎಂದು ಹೇಳತ್ತಾರೆ ' ಎಂಬ ಅಂಶ ನಿಪಿ.1 ದೂರಿನಲ್ಲಿ ಇಲ್ಲ ಎಂದರೆ ಸರಿ.

28. ಅದೇ ರೀತಿ ಫ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯ ಪ್ಯಾರಾ 3 ರಲ್ಲಿ ಹೇಳಿದ ' ನಾವು ವಿಜಯನಗರದಲ್ಲಿ ......... ಬನ್ನಿ ಎಂದು ಹೇಳಿದರು ' ಎಂಬ ಅಂಶವನ್ನು ಫ್ರಾಸಾ. 4 ರವರು ತಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

29. ಅದೇ ರೀತಿ ಫ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯ ಪ್ಯಾರಾ.3 ರಲ್ಲಿ ಹೇಳಿದ 'ಮನೆಯಲ್ಲಿ ಯಾರೋ ಬಬ್ಬ ಗಂಡಸು ಇದ್ದರು.........ಆಗ ಹುಡುಗ ಏನೂ ಮಾತನಾಡಲಿಲ್ಲ' ಎಂಬ ಅಂಶವನ್ನು ಫ್ರಾಸಾ.4 ರವರು ತಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

30. ಅದೇ ರೀತಿ ಫ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯ ಪ್ಯಾರಾ.4 ರಲ್ಲಿ ಹೇಳಿದ ಅಂಶಗಳೂ ಅವರ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

31. ಅದೇ ರೀತಿ ಫ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯ ಪ್ಯಾರಾ.5 ರಲ್ಲಿ ಹೇಳಿದ ' ಅಂಜಲಿ ಈ ರೀತಿ ನಾನು ಬಂದು ಬಿಟ್ಟಿದ್ದೇನಲ್ಲಾ .......... ವೇಲ್ ನಿಂದ ನೇಣು ಹಾಕಿಕೊಂಡಿದ್ದಳು' ಎಂಬ ಅಂಶವನ್ನು ಫ್ರಾಸಾ.4 ರವರು ತಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

32. ನನ್ನ ತನಿಖಾ ಕಾಲಕ್ಕೆ ನಾನು ನಿಪಿ.12 ನ್ನು ಪರಿಶೀಲನೆ ಮಾಡಿದ್ದೇನೆ. ಸದರಿ ನಿಪಿ.12 ರಲ್ಲಿ ಆರೋಪಿಯು ಬೈದುದರಿಂದ, ಮೃತೆ ಆತ್ಮಹತ್ಯೆ ಮಾಡಿಕೊಂಡಳು ಎಂದು ನಮೂದು ಇಲ್ಲ ಎಂದರೆ ಸರಿ.

33. ಮೃತಳನ್ನು ಆಕೆಯ ಗಂಡ ಮತ್ತು ಮಾವ ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ಸರಿ. ಮೃತವನ್ನು, ಆಕೆಯ ಗಂಡ ಅಭಿಷೇಕ್ ಗೆ ಒತ್ತಾಯ ಪೂರ್ವಕವಾಗಿ ಮದುವೆ ಮಾಡಿಕೊಡಲಾಗಿತ್ತು ಎನ್ನುವ ಅಂಶ ನನ್ನ ತನಿಖೆಯ ವೇಳೆ ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಾನು ವಾಸ್ತವಾಂಶ ಮರೆ ಮಾಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಮೃತೆ ಅಪ್ರಾಪ್ತಳಾದರೂ, ಆಕೆಗೆ ಮದುವೆ ಮಾಡಿದ್ದಾರೆ ಎಂಬ ಅಂಶ ನನ್ನ ಗಮನಕ್ಕೆ ಬಂದಿದ್ದರೂ, ಅವಳ ಪೋಷಕರು ಮತ್ತು ಆಕೆಯ ಗಂಡನ ವಿರುದ್ಧ ಪ್ರಕರಣ ದಾಖಲಾಗುತ್ತದೆ ಎಂಬ ಕಾರಣಕ್ಕೆ ನಾನು ಸದರಿ ಅಂಶವನ್ನು ಮರೆ ಮಾಚಿದ್ದೇನೆ ಎಂದರೆ ಸರಿಯಲ್ಲ. ಮೃತಳಿಗೆ ಆರೋಪಿಯು ಬೈದಿಲ್ಲ ಎಂಬ ಅಂಶ ನನ್ನ ತನಿಖೆಯ ವೇಳೆ ಕಂಡು ಬಂದಿತ್ತು ಎಂದರೆ ಸರಿಯಲ್ಲ.

34. ಮೃತಳ ಒಡವೆಗಳನ್ನು ಆಕೆಯ ತಾಯಿಗೆ ನೀಡಿದ್ದೇವೆ. ಮೃತಳು ಗಂಡನ ಮನೆಯಿಂದ ಮಂಡ್ಯಕ್ಕೆ ಬರುವಾಗ, ತನ್ನ ಬಟ್ಟೆ ಬರೆಗಳನ್ನು ಕೂಡ ಎತ್ತಿಕೊಂಡು ಬಂದಿದ್ದು ಎನ್ನುವ ಅಂಶ ನನ್ನ ತನಿಖೆಯ ವೇಳೆ ಕಂಡು ಬಂದಿತ್ತು ಎಂದರೆ ಸರಿಯಲ್ಲ. ಆರೋಪಿಯು ನಿರಪರಾಧಿ ಎಂದು ಕಂಡು ಬಂದಿದ್ದರೂ, ಆತನ ವಿರುದ್ಧ ಒಂದು ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎಫ್ ಎಸ್ ಎಲ್ ವರದಿಗಳನ್ನು ನಾನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯನ್ನು ಕೂಡ ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸೃಷ್ಟಿಸಿದ ದಾಖಲೆಗಳಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.